# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಜಿಎಂ/1333/2019/ಪಿಪಿ ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು

ದಿನಾಂಕ: 23.10.2020.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: ಶ್ರೀಮತಿ ಕಮಲವ್ವ ಎಸ್. ಭಾಗೋಜಿ, ಮುಖ್ಯಾಧಿಕಾರಿ, ಪುರಸಭೆ, ಉಗಾರ ಖುರ್ದ, ಕಾಗವಾಡ ತಾ., ಬೆಳಗಾವಿ (2) ಶ್ರೀ ಉದಯ ಎಸ್. ಘಟಕಾಂಬ್ಳೆ, ಕಛೇರಿ ವ್ಯವಸ್ಥಾಪಕರು, ಪುರಸಭೆ, ಉಗಾರ ಖುರ್ದ, ಕಾಗವಾಡ ತಾ., ಬೆಳಗಾವಿ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

1. ಶ್ರೀ ಬಂಗಾರಪ್ಪ ಶಿವಾಜಿ ಕಾಂಬ್ಳೆ, ಕೃಷ್ಣಕಿತ್ತೂರು ಗ್ರಾಮ, ಕಾಗವಾಡ ತಾ., ಬೆಳಗಾವಿ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀಮತಿ ಕಮಲವ್ವ ಎಸ್. ಭಾಗೋಜಿ, ಮುಖ್ಯಾಧಿಕಾರಿ, ಪುರಸಭೆ, ಉಗಾರ ಖುರ್ದ, ಕಾಗವಾಡ ತಾ., ಬೆಳಗಾವಿ (2) ಶ್ರೀ ಉದಯ ಎಸ್. ಘಟಕಾಂಬ್ಳೆ, ಕಛೇರಿ ವ್ಯವಸ್ಥಾಪಕರು, ಪುರಸಭೆ, ಉಗಾರ ಖುರ್ದ, ಕಾಗವಾಡ ತಾ., ಬೆಳಗಾವಿ (ಇನ್ನು ಮುಂದೆ '1 ಮತ್ತು 2ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ.

2. ದೂರಿನ ಸಾರಾಂಶ: ಕಾಗವಾಡ ತಾಲ್ಲೂಕಿನ ಉಗಾರ ಖುರ್ದ, ಪುರಸಭೆ ವ್ಯಾಪ್ತಿಯಲ್ಲಿ ಬರುವ ವಾರ್ಡ ನಂ. 13ರ ಆಸ್ತಿ ನಂ. 910/1 ಮೂಲ ವಿಸ್ತೀರ್ಣ 28*15 ಇದ್ದು ವಸತಿ ಉದ್ದೇಶದ ಮನೆ ಕುಲ್ಲಾ ಜಾಗ ಇದ್ದು ಪುರಸಭೆ ಚಾಲ್ತಿ ಆಸ್ತಿ

ರಿಜಿಸ್ಟರ್‌ನಲ್ಲಿ 41*15 ಅಂತ ದಾಖಲು ಮಾಡಿರುತ್ತಾರೆ. ಇದರಲ್ಲಿ 13*15 ಜಾಗೆಯನ್ನು ಜಾಗೆಯ ಮಾಲೀಕರ ಕಡೆಯಿಂದ ಅಕ್ರಮವಾಗಿ ಹಣ ಪಡೆದು ಭ್ರಷ್ಟಾಚಾರ ಮಾಡಿರುವುದು ಕಂಡುಬರುತ್ತದೆ. ಅಕ್ರಮದಲ್ಲಿ ಪುರಸಭೆ ಮುಖ್ಯಾಧಿಕಾರಿಗಳಾದ ಕಮಲವ್ವ ಎಸ್. ಭಾಗೋಜಿ ಮತ್ತು ವ್ಯವಸ್ಥಾಪಕರಾದ ಉದಯ್ ಎಸ್. ಘಟಕಾಂಬ್ಳೆ ಇವರು ಶಾಮಿಲಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಮೂಲ ಮಾಲೀಕರಾದ ಬೇಬಿ ಜಾಂ ಲಾಡಾಜಿ ನದಾಫ್ ಇವರಿಂದ ಭಾಸ್ಕರ್ ಸಾಬ್ ಇಮಾಮ್ ಸಾಬ್ ಸುರಕುಡ ಇವರುಖರೀದಿಸಿರುವಾಗ ಇದರ ವಿಸ್ತೀರ್ಣವು 28*15 ಇದ್ದದ್ದು ಖರೀದಿ ಪುಸ್ತಕದಲ್ಲಿ ದಾಖಲೆಯಿರುತ್ತದೆ. ಭಾಸ್ಕರ್ ಸಾಬ್ ಇಮಾಮ್ ಸಾಬ್ ಸುರಕುಡೆ ಇವರು ಸದಾಶಿವ ಮಧುಕರ್ ಶಿಂದೆ ಇವರಿಗೆ ಸದರಿ ಜಾಗವನ್ನುಖರೀದಿಗೆ ಕೊಟ್ಟಿರುತ್ತಾರೆ. ಖರೀದಿ ಕಾಲಕ್ಕು ಸಹಿತ ಖರೀದಿ ದಸ್ತಾದಲ್ಲಿ ವಿಸ್ತೀರ್ಣವು 28*15 ಇದ್ದು ಜಾಗದ ಸದ್ಯದ ಮಾಲೀಕರಾದ ಸದಾಶಿವ ಮಧುಕರ್ ಶಿಂದೆ ಇವರು ಎದುರುದಾರರೊಂದಿಗೆ ಶಾಮೀಲಾಗಿ ಹಣ ನೀಡಿ 28*15 ಜಾಗೆಯನ್ನು 41*15 ಜಾಗೆ ಎಂದುದಾಖಲು ಮಾಡಿಸಿದ್ದು ಇರುತ್ತದೆ. ಪುರಸಭೆ ಅಧಿಕಾರಿಗಳಿಗೆ ಉಗಾರ ಖುರ್ದ ಗ್ರಾಮದ ಸಾರ್ವಜನಿಕರು ಹಲವಾರು ಸಲ ಮನವಿಗಳನ್ನು ಸಲ್ಲಿಸಿದರೂ ಕೂಡ ಸದರಿ ಭ್ರಷ್ಟ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಅದಕ್ಕಾಗಿ ಮಾನ್ಯರಾದ ತಾವು ಅತಿಕ್ರಮ ಮಾಡಿ ಕಟ್ಟಡ ನಿರ್ಮಾಣ ಮಾಡಿರುವ ಸರ್ಕಾರಿ ಜಾಗದ ಕಟ್ಟಡವನ್ನು ತೆರವುಗೊಳಿಸಬೇಕು ಮತ್ತು ಅಕ್ರಮದಿಂದ ಹಣ ಪಡೆದು ಮೂಲ ಇದ್ದ ಜಾಗ ವಿಸ್ತೀರ್ಣವನ್ನು ಹೆಚ್ಚಿಗೆ ಮಾಡಿರುವ ಭ್ರಷ್ಟ ಅಧಿಕಾರಿಗಳ ಮೇಲೆ ತನಿಖೆ ಮಾಡಿ ಕ್ರಮ ಕೈಗೊಳ್ಳಬೇಕೆಂದು ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯೊಂದಿಗೆ 7.2.1996ರ ಮೂಲ ಖರೀದಿ ಪತ್ರ ಮತ್ತು 23.7.2018ರ ಸದಾಶಿವ ಮಧುಕರ ಶಿಂದೆ ಇವರ ನೋಂದಾಯಿಸಿದ ಖರೀದಿ ಪತ್ರ ಮುಚ್ಚಳಿಕೆ ಪತ್ರ ಮತ್ತು ಉತಾರೆಯನ್ನು ಲಗತ್ತಿಸಿರುತ್ತಾರೆ.

3. ಈ ಕುರಿತು ಮುಖ್ಯಾಧಿಕಾರಿ, ಪುರಸಭೆ, ಉಗಾರ ಖುರ್ದರವರಿಂದ ತನಿಖಾ ವರದಿ ಪಡೆಯಲು ಆದೇಶಿಸಿದ್ದು, ದಿ. 2.7.2019ರಂದು ಮುಖ್ಯಾಧಿಕಾರಿ, ಪುರಸಭೆ, ಉಗಾರ ಖುರ್ದ ರವರ ತನಿಖಾ ವರದಿ ಸಲ್ಲಿಸಿದ್ದು, ಕೆಳಗಿನಂತೆ ಇರುತ್ತದೆ.:-

(1) ಬೆಳಗಾವಿ ಜಿಲ್ಲೆಯ ಕಾಗವಾಡ ತಾಲ್ಲೂಕಿನ ಉಗಾರಖುರ್ದ ಪುರಸಭೆ ವ್ಯಾಪ್ತಿಯಲ್ಲಿ ಬರುವ ವಾರ್ಡ ನಂ. 13 ರಲ್ಲಿಯ ಆಸ್ತಿ ನಂ. 910/1 ನೇದ್ದರ ಜಾಗೆಯ ದಾಖಲೆಗಳನ್ನು ಪರಿಶೀಲಿಸಿದೆ. ಈ ಹಿಂದಿನ ಉಗಾರಖುರ್ದ ಗ್ರಾಮ ಪಂಚಾಯಿತಿಯ ಸನ್ 1996-97 ಸಾಲಿನ ಆಸ್ತಿ ರೆಜಿಸ್ಟರ್ ನಂ. 03 ರ ಪ್ರಕಾರ ಶ್ರೀಮತಿ ಬೆಬಿಜಾನ ಲಾಡಜಿ ನದಾಫ್ ಇವರು ಹೆಸರು ಕಡಿಮೆಗೊಳಿಸಿ ಶ್ರೀ ಭಾಸ್ಕರರಾವ ಇಮಾಮಸಾಬ ಸುರಕುಡ ಇವರ ಹೆಸರಿನ ಮೇಲೆ ಖಾತೆ ಬದಲಾವಣೆ ಆಗಿರುತ್ತದೆ. ಮನೆಯ ವಿಸ್ತೀರ್ಣ ದಾಖಲಿಸದೆ ಇರುವುದು ಕಂಡು ಬಂದಿರುತ್ತದೆ. 2012-13 ನೇ ಸಾಲಿನ ಗ್ರಾಮ ಪಂಚಾಯಿತಿ ಆಸ್ತಿ ರೆಜಿಸ್ಟರ್ ನಂ. 03 ನ್ನು ಪರಿಶೀಲಿಸಿ ನೋಡಲಾಗಿ ವಿಸ್ತೀರ್ಣವನ್ನು ದಾಖಲಿಸದೆ ಖಾಲಿ ಬಿಟ್ಟಿರುವುದು ಕಂಡು ಬಂದಿರುತ್ತದೆ. ಆದರೆ ಶ್ರೀ ಭಾಸ್ಕರಸಾಬ ಇಮಾಮಸಾಬ ಸುರಕುಡಿ ಇವರು ಆಸ್ತಿ ಸಂಖ್ಯೆ: 910/1 ನೇದ್ದರ ಆಸ್ತಿಯನ್ನು ಶ್ರೀಮತಿ ಬೆಬಿಜಾನ ಲಾಡಜಿ ನದಾಫ್ ಇವರಕಡೆಯಿಂದ ದಿನಾಂಕ: 02/02/1996 ರಂದು ಖರೀದಿಸಿದ ಖರೀದಿ ದಾಸ್ತಾವೇಜ ಪ್ರಕಾರ ವಿಸ್ತೀರ್ಣವು 82 X 15 ಇರುವುದು ಕಂಡು ಬಂದಿರುತ್ತದೆ.

(2) ಉಗಾರಖುರ್ದ ಗ್ರಾಮ ಪಂಚಾಯಿತಿಯನ್ನು ನಗರಾಭಿವೃದ್ಧಿ ಇಲಾಖೆಯು ದಿನಾಂಕ: 25/06/2015 ರಂದು ಮೇಲ್ದರ್ಜೆಗೇರಿಸಿ ಪುರಸಭೆಯಾಗಿ ಘೋಷಣೆ ಆಗಿರುತ್ತದೆ. ಸುತ್ತೋಲೆ ದಿನಾಂಕ: 01/10/2016 ರಲ್ಲಿ ಸೂಚಿಸಿರುವಂತೆ ಸ್ವಯಂ ಘೋಷಣೆ ಆಸ್ತಿ ತೆರಿಗೆಯನ್ನು ದಿನಾಂಕ: 01/04/2017 ರಿಂದ ಜಾರಿ ತರಲಾಗಿರುತ್ತದೆ.

(3) ಸನ್ 2017-18 ನೇ ಸಾಲಿನಲ್ಲಿ ಆಸ್ತಿ ಘೋಷಣೆ ಮಾಡುವಾಗ ತಮ್ಮ ಆಸ್ತಿಯು 14 X 15 ಇರುತ್ತದೆ ಅಂತಾ ಆಸ್ತಿ ಘೋಷಣಾ ಪತ್ರದಲ್ಲಿ ಲಿಖಿತವಾಗಿ ನೀಡಿರುತ್ತಾರೆ. ಕಂದಾಯ ಶಾಖೆಯ ಸ್ಥಳೀಯ ಸಿಬ್ಬಂದಿ ಶ್ರೀ ಪಿ.ಎನ್. ಕಾಂಬಳೆ ಕರ ವಸೂಲಿ ಸಹಾಯಕ ಹಾಗೂ ಕಂದಾಯ ವಿಭಾಗದ ಖಾತಾ ಬದಲಾವಣೆ ವಿಷಯ ನಿರ್ವಾಹಕ ಇವರು ಸದರಿ ಜಾಗೆಯನ್ನು ಪರಿಶೀಲಿಸಿ ಆಸ್ತಿ ಸಂಖ್ಯೆ: 910/1 ರ ಜಾಗೆಯ ಉತಾರ ಹಾಗೂ ಜಾಗೆಯ ಚೆಕ್ಕುಬಂದಿಯಲ್ಲಿ ವಿಸ್ತೀರ್ಣ 41 X 15 ನಮೂದಿಸಿ ರುಜು ಮಾಡಿ 1ನೇ ಎದುರುದಾರರಲ್ಲಿ ಮಂಡಿಸಿರುತ್ತಾರೆ. ಆದರೆ ಸದರಿ ಜಾಗೆಯ ದಾಸ್ತಾವೇಜ ಪತ್ರದ ಪ್ರಕಾರ ಪರಿಶೀಲಿಸಿ ತಾಳೆ ಮಾಡಿದಾಗ ಯಾವುದೇ ದಾಖಲಾತಿಗಳು 41 X 15 ಜಾಗೆ ಇರುವ ಬಗ್ಗೆ ಪುರಾವೆಗಳನ್ನು ಲಗತ್ತಿಸಿರುವುದಿಲ್ಲ. ಮುಖ್ಯಾಧಿಕಾರಿಗಳು ಘೋಷನಾ ಪತ್ರದನ್ವಯ ಹಾಗೂ ಕಬ್ಜೆ ವಹಿವಾಟಿನ ಆಧಾರದ ಮೇಲೆ ಖರೀದಿ ಪೂರ್ವದಲ್ಲಿ ಉತಾರ ಹಾಗೂ ಚೆಕ್ಕುಬಂದಿಯಲ್ಲಿ ಕ್ಷೇತ್ರ ದಾಖಲಿಸಿದ್ದು ಕಂಡು ಬಂದಿದ್ದು ಸದರಿ ಪ್ರದೇಶದಲ್ಲಿ 3 ಅಡಿ ಬೋಳು ಸಾರ್ವಜನಿಕ ರಸ್ತೆಗಳಿರುವುದು ಸ್ಥಳ ಪರಿಶೀಲನೆಯಿಂದ ಕಂಡು ಬಂದಿರುತ್ತದೆ.

(4) ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯಡಿಯಲ್ಲಿ ಆಸ್ತಿ ವಿಸ್ತೀರ್ಣ ಹಾಗೂ ತೆರಿಗೆಯನ್ನು ಘೋಷಿಸಿಕೊಂಡು ಪುರಸಭೆಯಿಂದ ನಮೂನೆ-3 (ಉತಾರಾ) ಹಾಗೂ ಚೆಕ್ಕುಬಂದಿಯನ್ನು ಪಡೆದು ಶ್ರೀ ಸದಾಶಿವ ಮಧುಕರ ಶಿಂಗೆ ಇವರಿಗೆ ದಿನಾಂಕ: 23/07/2018 ರಂದು ಮಾರಾಟ ಮಾಡಿರುತ್ತಾರೆ. ನಂತರ ಪುರಸಭೆಗೆ ಖಾತಾ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ.

(5) ಖಾತಾ ಬದಲಾವಣಾ ಆಕ್ಷೇಪಣೆ ಅವಧಿಯಲ್ಲಿ ಸಾರ್ವಜನಿಕರಿಂದ ಆಸ್ತಿಯ ವಿಸ್ತೀರ್ಣ ಹಾಗೂ ಸಾರ್ವಜನಿಕ ರಸ್ತೆ ಅತೀಕ್ರಮಣ ಆಗಿರುವ

ಬಗ್ಗೆ ಯಾವುದೇ ಆಕ್ಷೇಪಣಾ ಅರ್ಜಿಗಳು ಕಂಡು ಬಂದಿರುವುದಿಲ್ಲ ಎಂದು ಕಛೇರಿ ಟಿಪ್ಪಣಿಯ ಕಡತದಲ್ಲಿ ವರದಿ ನೀಡಿರುತ್ತಾರೆ ಎಂದು ನಮೂದಿಸಿರುತ್ತಾರೆ.

3. 1ನೇ ಎದುರುದಾರರ ಆಕ್ಷೇಪಣೆ: ಕಾಗವಾಡ ತಾಲ್ಲೂಕಿನ ಉಗಾರ ಖುರ್ದ ಪುರಸಭೆ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ. 13 ರ ಆಸ್ತಿ ನಂ. 910/1 ರ ಸ್ವತ್ತಿಗೆ ಸಂಬಂಧಪಟ್ಟಂತೆ ಪುರಸಭೆ ದಾಖಲೆಗಳಲ್ಲಿ ಆಸ್ತಿಯ ವಿಸ್ತೀರ್ಣ ನಮೂದಾಗಿರುವುದಿಲ್ಲ. ಬಿಲ್ ಕಲೆಕ್ಟರ್ ರವರ ವರದಿಯ ಆಧಾರದ ಮೇಲೆ ಶ್ರೀ ಸದಾಶಿವ ಮಧುಕರ ಸಿಂಧೆಯವರ ಹೆಸರಿಗೆ ಖಾತೆ ವರ್ಗಾವಣೆಯಾಗಿರುತ್ತದೆ. ದಿನಾಂಕ: 21/07/2018 ರ ಕ್ರಯ ಪತ್ರದಲ್ಲಿ ಸದರಿ ಸ್ವತ್ತಿನ ವಿಸ್ತೀರ್ಣ 41 X 15 ಅಡಿ ಇದ್ದು 20 X 14 ಅಡಿಗಳ ಕಟ್ಟಡ ಇರುತ್ತದೆ. ಪಿರ್ಯಾದುದಾರರು ದೂರಿನಲ್ಲಿ ಮಾಡಿರುವ ಆರೋಪಗಳು ಸುಳ್ಳಿರುತ್ತದೆ. ನಿಯಮಾನುಸಾರ ಖಾತೆ ಬದಲಾಯಿಸಿ ವಿಸ್ತೀರ್ಣವನ್ನು ದಾಖಲಿಸಲಾಗಿದೆ ಎಂದು ನಮೂದಿಸಿರುತ್ತಾರೆ.

4. ತನಿಖಾ ವರದಿಯೊಂದಿಗೆ ದಾಖಲೆಗಳನ್ನು ಸಲ್ಲಿಸಿದ್ದು ಪರಿಶೀಲಿಸಲಾಗಿ ಖಾತೆ ವರ್ಗಾವಣೆ ಮಾಡಿದ ಟಿಪ್ಪಣಿ ಪ್ರತಿಯಲ್ಲಿ 1ನೇ ಎದುರುದಾರರು ಖಾತೆ ವರ್ಗಾವಣೆ ಮಾಡುವಂತೆ ಆದೇಶಿಸಿ ಸಹಿ ಮಾಡಿರುವುದು ಕಂಡುಬಂದಿರುತ್ತದೆ.

5. ಪಿರ್ಯಾದುದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿರುತ್ತದೆ.

6. ಸ್ವತ್ತು ನಂ. 910/1 ರ ಮೂಲ ಮಾಲೀಕರಾದ ಬೇಬಿಜಾನ ಇವರಿಂದ ಭಾಸ್ಕರಸಾಬ ಇಮಾಮಸಾಬ ಸೂರಕೂಡ ಇವರು ಸ್ವತ್ತು ಖರೀದಿಸುವ ಕ್ರಯ ಪತ್ರದಲ್ಲಿ ವಿಸ್ತೀರ್ಣ 28X15 ಅಡಿ ಎಂದು ದಾಖಲಾಗಿದ್ದು ನಂತರ ಭಾಸ್ಕರಸಾಬ ಇಮಾಮಸಾಬ

ಸೂರಕುಡೆ ಇವರು ಶ್ರೀ ಮಧುಕರ ಶಿಂಗೆ ಇವರಿಗೆ ಕ್ರಯ ಮಾಡಿದ್ದು ಕ್ರಯ ಪತ್ರದಲ್ಲಿ ವಿಸ್ತೀರ್ಣ 41X15 ಎಂದು ದಾಖಲಿಸಿರುವುದು ಕಂಡುಬಂದಿರುತ್ತದೆ. ಮೂಲ ಕ್ರಯ ಪತ್ರದಲ್ಲಿ ಇರುವ ವಿಸ್ತೀರ್ಣದಂತೆ ದಿನಾಂಕ: 21/07/2018 ರ ಕ್ರಯ ಪತ್ರದಲ್ಲಿ ವಿಸ್ತೀರ್ಣ ನಮೂದಿರುವುದಿಲ್ಲವೆಂದು ಖಾತೆ ವರ್ಗಾವಣೆ ವೇಳೆ 1 ಮತ್ತು 2 ನೇ ಎದುರುದಾರರು ಅಗತ್ಯ ಕ್ರಮ ಜರುಗಿಸಿ ವಿಸ್ತೀರ್ಣದ ಬಗ್ಗೆ ಸೂಕ್ತ ಆದೇಶ ಮಾಡಬೇಕಿದ್ದು ಮಾಡದೆ ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿರುತ್ತದೆ.

7. <u>2ನೇ ಎದುರುದಾರರ ಆಕ್ಷೇಪಣೆಗಳು:-</u> ಕಛೇರಿ ವ್ಯವಸ್ಥಾಪಕರಾಗಿ ಕಾರ್ಯ ನಿರ್ವಹಿಸುತ್ತಿರುತ್ತೇನೆ. ಕಂದಾಯ ವಿಭಾಗದ ವಿಷಯ ನಿರ್ವಾಹಕರು ಖಾತಾ ಬದಲಾವಣೆಗೆ ಬರುವ ದೈನಂದಿನ ಅರ್ಜಿಗಳನ್ನು ಸ್ವೀಕರಿಸಿ ನೋಂದಾವಣಿ ದಸ್ತ ಪ್ರಕಾರ ಕಛೇರಿ ಟಿಪ್ಪಣಿಯಲ್ಲಿ ನಮೂದಿಸಿರುತ್ತಾರೆ. ದಾಖಲೆಗಲನ್ನು ಪರಿಶೀಲಿಸಿ ಮುಖ್ಯಾಧಿಕಾರಿಗಳಲ್ಲಿ ಮಂಜೂರಿಗಾಗಿ ಖಾತಾ ಬದಲಾವಣೆಗೆ ಕಡತ ಮಂಡಿಸುತ್ತೇನೆ. ನಂತರ ವಿಷಯ ನಿರ್ವಾಹಕರು ಹಕ್ಕು ಬದಲಾವಣೆಗೆ ಕ್ರಮ ಜರುಗಿಸುತ್ತಾರೆ.

8. ಆಸ್ತಿ ಸಂಖ್ಯೆ: 910/1 ನೇದ್ದರ ನಮೂನೆ-III (ಉತಾರ) ಚೆಕ್ಕುಬಂದಿ ಪ್ರಮಾಣ ಪತ್ರಗಳಲ್ಲಿ ಆಸ್ತಿ ವಿಸ್ತೀರ್ಣ ದಾಖಲಿಸುವಾಗ ನಿರ್ವಾಹಕರು ನನ್ನಿಂದ ರುಜು ಪಡೆದುಕೊಂಡಿರುವುದಿಲ್ಲ ನಮೂನೆ-III ಹಾಗೂ ಚೆಕ್ಕುಬಂದಿ ದಾಖಲೆಗಳಿಗೆ ನೇರವಾಗಿ ಮುಖ್ಯಾಧಿಕಾರಿಗಳ ರುಜು ಪಡೆದು ಆಸ್ತಿ ಮಾಲೀಕರಿಗೆ ನೀಡಿರುತ್ತಾರೆ.

9. ಕಂದಾಯ ವಿಭಾಗದ ವಿಷಯ ನಿರ್ವಾಹಕರಾದ ಶ್ರೀ ಪ್ರಕಾಶ ಎನ್. ಕಾಂಬಳೆ ವಸೂಲಿ ಸಹಾಯಕ ಇವರು ಆಸ್ತಿ ಸಂ. 901/1 ಜಾಗೆಯ ಹೆಚ್ಚುವರಿ ವಿಸ್ತೀರ್ಣವನ್ನು

ನಮೂನೆ-III (ಉತಾರ) ಹಾಗೂ ಚೆಕ್ಕುಬಂದಿಗಳಲ್ಲಿ ದಾಖಲಿಸಿ ತಯಾರಿಸಿ 1ನೇ ಎದುರುದಾರರಿಂದ ರುಜು ಪಡೆದಿರುತ್ತಾರೆ.

10. ನೋಂದಾವಣಿ ದಾಸ್ತಾವೇಜಗಳ ಪ್ರಕಾರ ಖಾತಾ ಬದಲಾವಣೆಗೆ ಬಂದ ಅರ್ಜಿಯನ್ನು ವಿಷಯ ನಿರ್ವಾಹಕರ ಕಛೇರಿ ಟಿಪ್ಪಣಿಯ ಪ್ರಕಾರ ಸಾರ್ವಜನಿಕ ಪ್ರಕಟಣಾ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಬಂದಿರುವುದಿಲ್ಲ. ಖಾತಾ ಬದಲಾವಣೆಗೆ ಮುಖ್ಯಾಧಿಕಾರಿಗಳ ಮಂಜೂರಿಗಾಗಿ ವರದಿ ಸಲ್ಲಿಸಿರುತ್ತೇನೆ. ಖರೀದಿ ಪೂರ್ವದಲ್ಲಿನ ನಮೂನೆ-III (ಉತಾರ) ಹಾಗೂ ಚೆಕ್ಕುಬಂದಿಗಳಲ್ಲಿ ಜಾಗೆಯ ವಿಸ್ತೀರ್ಣ ದಾಖಲಿಸಿದ್ದು ನನ್ನ ಪರಿಶೀಲನೆಗೆ ಬಂದಿರುವುದಿಲ್ಲ ಎಂದು ನಮೂದಿಸಿರುತ್ತಾರೆ.

11. ಲಗತ್ತಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿರುತ್ತದೆ.

(1) ಈ ಮೋದಲು ಉಗಾರಖುರ್ದ ಗ್ರಾಮ ಪಂಚಾಯ್ತಿ ಇದ್ದು 1996-97 ನೇ ಸಾಲಿನ ಕಡತಗಳಲ್ಲಿ ಆಸ್ತಿ ಸಂ. 910/1 ರ ಸ್ವತ್ತಿಗೆ ಸಂಬಂಧಪಟ್ಟಂತೆ ಸ್ವತ್ತಿನ ವಿಸ್ತೀರ್ಣ ದಾಖಲಾಗಿರುವುದಿಲ್ಲ.

(2) ಶ್ರೀಮತಿ ಬೆಬಿಜಾನ ಲಾಡಜಿ ನದಾಫ್ ಇವರು ದಿನಾಂಕ: 02/02/1996 ರಂದು ಶ್ರೀ ಭಾಸ್ಕರಸಾಬ ಇಮಾಮಸಾಬ ಸುರಕುಡೆ ಇವರಿಗೆ ಸದರಿ ಆಸ್ತಿಯನ್ನು ನೊಂದಣಿ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದು ಪತ್ರದಲ್ಲಿ ವಿಸ್ತೀರ್ಣ 28 X 15 ಅಡಿಗಳು ಎಂದಿದೆ.

(3) ದಿನಾಂಕ: 25/06/2015 ರಂದು ಉಗಾರಖುರ್ದ ಗ್ರಾಮ ಪಂಚಾಯಿತಿಯನ್ನು ಮೇಲ್ದರ್ಜೆಗೇರಿಸಿ ಪುರಸಭೆ ಎಂದು ಘೋಷಣೆ ಮಾಡಿರುತ್ತಾರೆ.

(4) 2017-18ನೇ ಸಾಲಿನಲ್ಲಿ ಆಸ್ತಿ ಘೋಷನಾ ಪತ್ರದಲ್ಲಿ ಸದರಿ ಸ್ವತ್ತಿನ ವಿಸ್ತೀರ್ಣವನ್ನು 41 X 15 ಅಡಿಗಳೂ ಎಂದು ತಪ್ಪಾಗಿ ನಮೂದಿಸಿರುತ್ತಾರೆ. ಪುರಸಭೆ ಸಿಬ್ಬಂದಿಗಳೂ ಜಾಗ ಪರಿಶೀಲಿಸಿ ಆಸ್ತಿ ಜಾಗೆಯ ಉತಾರ ಹಾಗೂ ಚೆಕ್ಕುಬಂದಿಯಲ್ಲಿ ವಿಸ್ತೀರ್ಣ 41 X 15 ಎಂದು ನಿರ್ಲಕ್ಷ್ಯವಾಗಿ ನಮೂದಿಸಿ ರುಜು ಮಾಡಿರುತ್ತಾರೆ. ಸದರಿ ಪ್ರದೇಶದಲ್ಲಿ 3 ಅಡಿ ಬೋಳು ಸಾರ್ವಜನಿಕ ರಸ್ತೆ ಇರುವುದು ಸ್ಥಳ ತನಿಖೆಯಿಂದ ಕಂಡುಬಂದಿರುವ ಬಗ್ಗೆ ಮುಖ್ಯಾಧಿಕಾರಿಗಳು ತನಿಖಾ ವರದಿ ಸಲ್ಲಿಸಿರುತ್ತಾರೆ.

(5) ಆಸ್ತಿ ವಿಸ್ತೀರ್ಣ ತಪ್ಪಾಗಿ ನಮೂದಿಸಿದ/ಪುರಸಭೆಯಿಂದ ನಮೂನೆ-3 ಉತಾರಾ ಹಾಗೂ ಚೆಕ್ಕುಬಂದಿಯನ್ನು ಪಡೆದು ದಿನಾಂಕ: 23/07/2018 ರಂದು ಶ್ರೀ ಭಾಸ್ಕರ ಸಾಬ ಇಮಾಮಸಾಬ ಸುರಕುಡೆ ಇವರು ಶ್ರೀ ಸದಾಶಿವ ಮಧುಕರ ಶಿಂಗೆ ಇವರಿಗೆ ವಿಸ್ತೀರ್ಣ 41 X 15 ಅಡಿಗಳು ಎಂದು ನಮೂದಿಸಿ ಕ್ರಯ ಪತ್ರ ನೊಂದಣಿ ಮಾಡಿಕೊಟ್ಟಿರುತ್ತಾರೆ.

(6) ಸದರಿ ಆಸ್ತಿಯ ವಿಸ್ತೀರ್ಣ ಹಾಗೂ ಸಾರ್ವಜನಿಕ ರಸ್ತೆ ಅತಿಕ್ರಮಣ ಆಗಿರುವ ಬಗ್ಗೆ ಯಾವುದೇ ಆಕ್ಷೇಪಣೆಗಳೂ ಬರದ ಕಾರಣ ಖಾತೆ ಬದಲಾವಣೆ ಮಾಡಲು ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಿ ಟಿಪ್ಪಣಿ ಹಾಳೆಯಲ್ಲಿ ಖಾತೆ ವರ್ಗಾಯಿಸಲು ಆದೇಶವಾಗಿರುತ್ತದೆ.

(7) ದಿನಾಂಕ: 02/02/1996 ರ ಕ್ರಯ ಪತ್ರದಲ್ಲಿ ಆಸ್ತಿ ಸಂ. 910/1 ರ ವಿಸ್ತೀರ್ಣ 28 ಥ 15 ಅಡಿಗಳಿದ್ದು ನಂತರ ಪುರಸಭೆಯ ದಾಖಲೆಗಳಲ್ಲಿ ಯಾವುದೇ ಅಧಿಕೃತ ದಾಖಲೆಗಳ ಆಧಾರಗಳು ಇಲ್ಲದಿದ್ದರೂ ಸದರಿ ಸ್ವತ್ತಿನ ವಿಸ್ತೀರ್ಣ 41 X 15 ಅಡಿಗಳು ಎಂದು ಬದಲಾಯಿಸಿ ಖಾತೆ

ಮಾಡಿದ್ದು ಸದರಿ ಜಾಗದಲ್ಲಿ 3 ಅಡಿಗಳ ಸಾರ್ವಜನಿಕ ರಸ್ತೆ ಸೇರಿರುವುದು ತನಿಖೆಯಲ್ಲಿ ಕಂಡುಬಂದಿರುತ್ತದೆ

(8) 2018-19ನೇ ಸಾಲಿನ ಆಸ್ತಿ ತೆರಿಗೆ ಬೇಡಿಕೆ ಹಾಗೂ ನಮೂನೆ-3 ರ ರಿಜಿಸ್ಟರ್ ಪ್ರತಿಯಲ್ಲಿ ಸ್ವತ್ತು ಸಂ. 910/1 ರ ವಿಸ್ತೀರ್ಣ 41 X 15 ಅಡಿಗಳೆಂದು ನಿಯಮಬಾಹಿರವಾಗಿ ನಮುದಿಸಿದ್ದು ಸದರಿ ದಾಖಲೆಗೆ 1ನೇ ಎದುರುದಾರರ ಸಹಿ ಇರುತ್ತದೆ.

(9) ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ಪುರಸಭೆ ವತಿಯಿಂದ ನೀಡಿದ ಚೆಕ್ಕುಬಂದಿ ದಾಖಲೆಯಲ್ಲಿ ವಿಸ್ತೀರ್ಣವನ್ನು ನಿಯಮಬಾಹಿರವಾಗಿ 41 X 15 ಅಡಿಗಳೆಂದು ನಮೂದಿಸಿದ್ದು ಸದರಿ ದಾಖಲೆಗೆ 1ನೇ ಎದುರುದಾರರ ಸಹಿ ಇರುತ್ತದೆ.

(10) ದಿನಾಂಕ: 24/07/2018 ರ ಕಛೇರಿ ಟಿಪ್ಪಣಿ ಪ್ರತಿ ಸಲ್ಲಿಸಿದ್ದು ಶ್ರೀ ಸದಾಶಿವ ಮಧುಕರ ಶಿಂಗೆ ಇವರು ಸದರಿ ಸ್ವತ್ತಿನ ಖಾತೆ ವರ್ಗಾಯಿಸಲು ಅರ್ಜಿ ಸಲ್ಲಿಸಿದ್ದು ಖರೀದಿ ಪತ್ರದಲ್ಲಿ ಅಕ್ರಮವಾಗಿ ನಮೂದಿಸಿದ ವಿಸ್ತೀರ್ಣ 41 X 15 ಅಡಿಗಳ ಖಾತೆ ವರ್ಗಾವಣೆಯನ್ನು ಮಾಡಲು ಕ್ರಮ ಜರುಗಿಸಿರುವುದು ಕಂಡುಬಂದಿರುತ್ತದೆ. ಸದರಿ ವಿಸ್ತೀರ್ಣದಲ್ಲಿ 3 ಅಡಿಗಳ ಸಾರ್ವಜನಿಕ ರಸ್ತೆ ಸೇರಿದ್ದರೂ ಖಾತೆ ವರ್ಗಾವಣೆ ಮಾಡಲು ಸಾರ್ವಜನಿಕರಿಂದ ಆಕ್ಷೇಪಣೆ ಬಂದಿಲ್ಲವೆಂದು ಟಿಪ್ಪಣಿಯಲ್ಲಿ ನಮೂದಿಸಿ ಖಾತೆ ವರ್ಗಾವಣೆ ಮಾಡಲು ಆದೇಶ ಮಾಡಿರುವುದು ಕಂಡುಬಂದಿರುತ್ತದೆ. ಸದರಿ ಕಛೇರಿ ಟಿಪ್ಪಣಿಯಲ್ಲಿ 2ನೇ ಎದುರುದಾರರು ಸಲ್ಲಿಸಿದ ಟಿಪ್ಪಣಿ ಹಾಗೂ ಸಹಿ ಇರುತ್ತದೆ. ಖಾತೆ ವರ್ಗಾವಣೆ ಮಾಡುವಂತೆ ಆದೇಶ ಮಾಡಿ 1ನೇ ಎದುರುದಾರರು ಟಿಪ್ಪಣಿ ಮಂಡಿಸಿ ಸಹಿ ಮಾಡಿರುತ್ತಾರೆ.

(11) 02/02/1996 ರ ಕ್ರಯ ಪತ್ರದಲ್ಲಿ ಸ್ವತ್ತಿನ ವಿಸ್ತೀರ್ಣ 28 X 15 ಅಡಿಗಳು ಎಂದು ನಮೂದಿಸಿದ್ದರೂ ಸದರಿ ವಿಚಾರವನ್ನು ಪರಿಶೀಲಿಸದೆ 2018ನೇ ಸಾಲಿನ ನಮೂನೆ-3 ದಾಖಲೆಯಲ್ಲಿ, ಚೆಕ್ಕುಬಂದಿ ದಾಖಲೆಯಲ್ಲಿ, ಖಾತೆ ವರ್ಗಾವಣೆ ಟಿಪ್ಪಣಿ ದಾಖಲೆಯಲ್ಲಿ ವಿಸ್ತೀರ್ಣವನ್ನು ನಿಯಮಬಾಹಿರವಾಗಿ ಯಾವುದೇ ಆಧಾರಗಳು ಇಲ್ಲದೆ ಸ್ವತ್ತಿನ ವಿಸ್ತೀರ್ಣವನ್ನು 41 X 15 ಅಡಿಗಳೆಂದು ನಮೂದಿಸಿ 1 ಮತ್ತು 2ನೇ ಎದುರುದಾರರು ಸದರಿ ದಾಖಲೆಗಳಲ್ಲಿ ಸಹಿಮಾಡಿ ಕರ್ತವ್ಯಲೋಪ ಎಸಗಿರುವುದು ತನಿಖೆಯಲ್ಲಿ ಸ್ಪಷ್ಟವಾಗಿ ಕಂಡುಬಂದಿರುತ್ತದೆ.

12. ಸದರಿ 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸಲ್ಲಿಸಿರುವ ಅಂಶಗಳು ಮತ್ತು ಮೂಲ ಕ್ರಯ ನೋಂದಾಣಿ ಮಾಲೀಕರಾದ ಬಿಬಿ ಜಾನ್ ನದಾಫ್ ಇವರ ಕ್ರಯ ಪತ್ರ ದಿ. 2.2.1996ರ ಅನ್ವಯ ಮತ್ತು ಎದುರುದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಎದುರುದಾರರು ಉದ್ದೇಶಪೂರ್ವಕವಾಗಿ ಸರ್ಕಾರಿ ಜಾಗವನ್ನು ಖಾಸಗಿ ವ್ಯಕ್ತಿಯವರಿಗೆ ಹಸ್ತಾಂತರಿಸುವ ಉದ್ದೇಶದಿಂದ ಸರ್ಕಾರವು ಹೊರಡಿಸಿದ ಸ್ವಯಂ ಘೋಷಿತ ಆಸ್ತಿ ತೆರಿಗೆ ಘೋಷಣೆ ಪ್ರಪತ್ರದಂತೆ ಅಳತೆಯನ್ನು ದಾಖಲಿಸಿ ಸಹಕರಿಸಿರುವುದು ಮತ್ತು ತಮ್ಮ ಅಧಿಕಾರದಲ್ಲಿ ಕರ್ತವ್ಯ ಲೋಪ ಮಾಡಿರುವುದು ಕಂಡುಬರುವುದರಿಂದ ಎದುರುದಾರರು ಆಕ್ಷೇಪಣೆಗಳನ್ನು ಒಪ್ಪಲು ಸಾಧ್ಯವಿರುವುದಿಲ್ಲ.

13. ಈ ಮೇಲ್ಕಾಣಿಸಿ ಕಾರಣಗಳಿಂದಾಗಿ 1 ಮತ್ತು 2ನೇ ಎದುರುದಾರರು ತಮ್ಮ ಅಧಿಕಾರ ಅವಧಿಯಲ್ಲಿ ಖಾಸಗಿ ವ್ಯಕ್ತಿಗೆ ಸಹಕರಿಸುವ ಉದ್ದೇಶಿಂದ ಮೂಲ ಖರೀದಿ ಪತ್ರ ತಮ್ಮೊಂದಿಗೆಯಿದ್ದರೂ ಸಹಾ ಅದನ್ನು ಪರಿಶೀಲಿಸಿದೆ ಬದಿಗೊತ್ತಿ ಖಾಸಗಿ ವ್ಯಕ್ತಿಗೆ ಲಾಭ ಮಾಡಿಕೊಡುವ ಉದ್ದೇಶದಿಂದ, ತಮ್ಮ ಹುದ್ದೆಯನ್ನು ಬಳಸಿಕೊಂಡು

ಕರ್ತವ್ಯಲೋಪ ಹಾಗೂ ನಿರ್ಲಕ್ಷ್ಯ ತೋರಿ ಲಾಭ ಮಾಡಿಕೊಳ್ಳುವ ಉದ್ದೇಶದಿಂದ ಎದುರುದಾರರು ಕರ್ತವ್ಯ ಲೋಪ ಮಾಡಿರುವುದು ಸಾಬೀತಾಗುತ್ತದೆ.

14. ಮೇಲೆ ಚರ್ಚಿಸಲಾದ ಕಾರಣಗಳ ಹಿನ್ನಲೆಯಲ್ಲಿ ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1) (i) ರಿಂದ (iii) ರನ್ವಯ 1 ಮತ್ತು 2ನೇ ಎದುರುದಾರರಾದ (1) ಶ್ರೀಮತಿ ಕಮಲವ್ವ ಎಸ್. ಭಾಗೋಜಿ, ಮುಖ್ಯಾಧಿಕಾರಿ, ಪುರಸಭೆ, ಉಗಾರ ಖುರ್ದ, ಕಾಗವಾಡ ತಾ., ಬೆಳಗಾವಿ (2) ಶ್ರೀ ಉದಯ ಎಸ್. ಘಟಕಾಂಬ್ಳೆ, ಕಛೇರಿ ವ್ಯವಸ್ಥಾಪಕರು, ಪುರಸಭೆ, ಉಗಾರ ಖುರ್ದ, ಕಾಗವಾಡ ತಾ., ಬೆಳಗಾವಿ ರವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು "ಉಪಲೋಕಾಯುಕ್ತರಿಗೆ" ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

15. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿದೆ.

N. Anand 23/10

[ನ್ಯಾಯಮೂರ್ತಿ ಎನ್. ಆನಂದ]
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**